ಕುಳಿತುಕೊಳ್ಳಲು ಪ್ರಯತ್ನವನ್ನು ಮಾಡಿ. ಇಲ್ಲದಿದ್ದರೆ ಈ ಸ್ಥಾನ ಬೇಡವೆಂದು ನೀವು ಹೊರಗಡೆ ಬನ್ನಿ. ಇಲ್ಲದಿದ್ದರೆ ನೀವು ಈ ಬೇಡಿಕೆಗಳನ್ನು ಈಡೇರಿಸಬೇಕು. ಒಂದು ಗಂಟೆ ಇಂತಹ ಬಜೆಟ್‌ನ ದಪ್ಪ ಪುಸ್ತಕವನ್ನು ನಿಮಗೆ ಶಕ್ತಿ ಇತ್ತು ನೀವು ಓದಿದಿರಿ, ಆದರೆ ಇದರಿಂದ ನಿಮಗೆ ಏನು ಪ್ರಚಾರ ಸಿಕ್ಕಿದೆ, ಅದಕ್ಕೆ ಅನುಗುಣವಾದಂಥ ಯಾವುದೇ ಕಾರ್ಯಕ್ರಮಗಳಿಲ್ಲದ ಬಜೆಟ್ ಇದು ಎಂದು ನಾನು ವಿರೋಧವನ್ನು ಮಾಡಿ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

6. ಪ್ರಕಟಣೆ

ಅಧ್ಯಕ್ಷರು : ದಿನಾಂಕ 21ನೇ ಜುಲೈ, 2004ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ವಿಧಾನ ಸಭೆಯ ಕಾರ್ಯಕಲಾಪಗಳನ್ನು ಈ ಕೆಳಕಂಡಂತೆ ನಡೆಸಲಾಗುವುದೆಂದು ತೀರ್ಮಾನಿಸಲಾಯಿತು.

1. ದಿನಾಂಕ 23ನೇ ಜುಲೈ, 2004ರಿಂದ ಪ್ರತಿದಿನ ಬೆಳಿಗ್ಗೆ 10-00 ಗಂಟೆಗೆ ಅಧಿವೇಶನ ಸಮಾವೇಶಗೊಳ್ಳುವುದು.

2. ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.	ಜುಲೈ 23 ರಿಂದ 27 ರವರೆಗೆ
3. ಬೇಡಿಕೆಗಳ ಮೇಲಿನ ಚರ್ಚೆ, ಸರ್ಕಾರದಿಂದ ಉತ್ತರ ಹಾಗೂ ಅಂಗೀಕರಿಸುವುದು	ಜುಲೈ 28 ಹಾಗೂ 29 ರಂದು

4. ದಿನಾಂಕ 6ನೇ ಆಗಸ್ಟ್, 2004ರವರೆಗೆ ಪ್ರಸ್ತುತ ಅಧಿವೇಶನವನ್ನು ನಡೆಸಲು ತೀರ್ಮಾನಿಸಲಾಗಿದೆ.

ಇದಕ್ಕೆ ಸದನದ ಸಹಮತಿಯಿದೆಯೆಂದು ಭಾವಿಸುತ್ತೇನೆ. ಈಗ ಸದನವನ್ನು ನಾಳೆ ದಿನಾಂಕ: 23-7-04ರಂದು ಬೆಳಿಗ್ಗೆ: 10 ಗಂಟೆ ವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಾಯಂಕಾಲ 5 ಗಂಟೆ 10 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 23-7-2004 ರಂದು ಬೆಳಿಗ್ಗೆ: 10.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

7. ಅನುಬಂಧ I

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

41 (312): ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಸಾಲಿನಲ್ಲಿ ರೈತ ಗ್ರಾಹಕರು ವಿದ್ಯುತ್ ಬಾಕಿ ಪಾವತಿಸಿದ ಮೊತ್ತ ಎಷ್ಟು;

ಆ) ನೀರಾವರಿ ಪಂಪ್ ಸೆಟ್ ಬಳಕೆದಾರರ ಬಾಕಿ ಮೊತ್ತವನ್ನು ಈ ಹಿಂದಿನ ಸರ್ಕಾರ ಮನ್ನಾಮಾಡಿರುವುದು ನಿಜವೆ;

ಇ) ಅಂತಹ ನೀರಾವರಿ ಪಂಪು ಸೆಟ್ ಬಳಕೆದಾರರ ಸಂಖ್ಯೆ ಎಷ್ಟು: